# ಆಟದ ಮನಸು ನಟನೆಯ ಕನಸು

**ಶರತ್ ಕ್ಷತ್ರಿಯ**
**ಉದಯದ 'ರಾಧಿಕಾ'ದ ಚಿರಂತ್**

◆ **ಪಾತ್ರ– ನಟನೆ ಅಂದ್ರೆ ಏನು?**

ಅದೊಂದು ಚಿತ್ರಣ, ಅದಕ್ಕೊಂದು ವ್ಯಕ್ತಿತ್ವದ ರೂಪು ನೀಡುವುದು ನಟನೆ. ಪಾತ್ರ ಎಂತಹದ್ದೇ ಆಗಿದ್ದರೂ ಅದಕ್ಕೆ ಜೀವ ತುಂಬುವುದು ನಟನ ಕರ್ತವ್ಯ. ಸೆಕ್ಯುರಿಟಿ ಗಾರ್ಡ್ ಕೂಡ ಒಂದು ಪಾತ್ರವಾಗಬಹುದು. ಅದಕ್ಕೂ ಅದರದ್ದೇ ಆದ ದೇಹ ಭಾಷೆ ಇರುತ್ತದೆ. ಕರ್ತವ್ಯ ನಿರ್ವಹಣೆಯ ಸಂದರ್ಭದ ಅವರ ವರ್ತನೆಯಲ್ಲಿ ಅದು ಗೋಚರಿಸುತ್ತದೆ. ಅದನ್ನು ನಟ ಗುರುತಿಸಿ ತನ್ನಲ್ಲಿ ತುಂಬಿಕೊಳ್ಳಬೇಕು. 'ರಾಧಿಕಾ'ದಲ್ಲಿ ಬಾಕ್ಸಿಂಗ್ ಚಾಂಪಿಯನ್ ಪಾತ್ರವನ್ನು ಮಾಡುತ್ತಿದ್ದೇನೆ. ದೊಡ್ಡ ಉದ್ಯಮಿ ಕೂಡ ಆಗಿದ್ದೇನೆ.

◆ **ನಟರಾಗಿದ್ದು ಹೇಗೆ?**

ಚಿಕ್ಕ ವಯಸ್ಸಿನಿಂದಲೂ ನನಗೆ ವೇದಿಕೆಯ ಒಡನಾಟ ಹೆಚ್ಚಿತ್ತು. ಭಾಷಣ– ಡಾನ್ಸ್– ನಾಟಕ ಬರುತ್ತೋ ಬಿಡುತ್ತೋ ಮೊದಲು ಭಾಗವಹಿಸಬೇಕು ಎಂದು ನಮ್ಮ ತಾಯಿ ಹೇಳುತ್ತಿದ್ದರು. ಶಾಲೆಯ ಎಲ್ಲ ಕಾರ್ಯಕ್ರಮಗಳಲ್ಲಿಯೂ ಭಾಗಿಯಾಗುತ್ತಿದ್ದೆ. ಒಂದನೇ ತರಗತಿಯಿಂದ ಆರಂಭಿಸಿದ್ದ ಆ ನನ್ನ ಹವ್ಯಾಸ ಕಾಲೇಜು ದಿನಗಳ ತನಕ ಮುಂದುವರಿಯಿತು. ನಾನು ಸ್ಟೇಜ್ ಅಥವಾ ಗ್ರೌಂಡ್‌ನಲ್ಲೇ ಶೈಕ್ಷಣಿಕ ಅವಧಿಯನ್ನು ಹೆಚ್ಚು ಕಳೆದಿದ್ದೇನೆ. ಪ್ರತಿಭಾ ಕಾರಂಜಿಗೆ ತಪ್ಪದೇ ಭಾಗವಹಿಸುತ್ತಿದ್ದೆ. ಡಾನ್ಸ್ ಮಾಡುವುದರ ಜೊತೆ ಅಥ್ಲೆಟಿಕ್, ಕ್ರಿಕೆಟ್, ಬಾಸ್ಕೆಟ್ ಬಾಲ್ ಆಡುತ್ತಿದ್ದೆ. ಕುಂದಾಪುರದ ಕಾಲೇಜಿನಲ್ಲಿ ಮಾಡೆಲಿಂಗ್ ಶೋ ಸ್ಪರ್ಧೆ ಇತ್ತು. ನನಗೆ ಗೊತ್ತಿಲ್ಲದಂತೆ ನಾನೂ ಪ್ರತಿಸ್ಪರ್ಧಿಯಾಗಿದ್ದೆ. ಅಂದರೆ ನನ್ನ ಸ್ನೇಹಿತರು ಹೆಸರು ಕೊಟ್ಟಿದ್ದರು. ಆ ಸ್ಪರ್ಧೆಯಲ್ಲಿ ಮೊದಲಿಗನಾದೆ. ಅದು ನಿಜಕ್ಕೂ ಅಚ್ಚರಿಯನ್ನು ತಂದಿತ್ತು. ಅದರ ಮುಂದಿನ ವರ್ಷವೂ ಸ್ಪರ್ಧಿಸಿ ನಾನೇ ಗೆದ್ದೆ. ಅದೇ ಸಮಯಕ್ಕೆ ಬೆಂಗಳೂರಿನಿಂದ ಮಾಡೆಲಿಂಗ್‌ಗೆ ಕರೆ ಬಂತು. ರ‍್ಯಾಂಪ್ ಶೋ ಆರಂಭವಾಗಿದ್ದೇ ನಟನೆಯ ಕನವರಿಕೆ ಕಾಡಲು ಶುರುವಾಯಿತು. ಹಾಗಾಗಿ ರಂಗಭೂಮಿಯಲ್ಲಿ ತೊಡಗಿದೆ. 'ಅನೇಕ', 'ರೂಪಾಂತರ' ತಂಡದಲ್ಲಿ ಕೆಲಸ ಮಾಡಿದೆ.

◆ **ರಂಗಭೂಮಿಯ ನಿಮ್ಮ ಕಥೆಗಳನ್ನು ಹೇಳಿ.**

'ರಂಗಧರ್ಮ' ಎಂಬ ಸಣ್ಣ ತಂಡದ ಮೂಲಕ ರಂಗಭೂಮಿಯ ಚಟುವಟಿಕೆ ಆರಂಭವಾಯಿತು. ತಂಡವನ್ನು ಕ್ರಿಯಾಶೀಲವಾಗಿ ಇಟ್ಟುಕೊಂಡಿದ್ದೆವು. ಯಾವುದಾದರೂ ಪ್ರದರ್ಶನ ಮಾಡೋಣ ಎಂದರೆ ತೊಂದರೆ ಆಗ್ತಾ ಇತ್ತು. ಆರ್ಥಿಕ ಬೆಂಬಲ ಕೂಡ ಇರಲಿಲ್ಲ. ನಾಲ್ವರು ಇದ್ದ ಆ ತಂಡದಲ್ಲಿ ಕೊನೆಗೆ ಇಬ್ಬರು ಉಳಿದೆವು. ಒಮ್ಮೆ ರವೀಂದ್ರ ಕಲಾಕ್ಷೇತ್ರದಲ್ಲಿ 'ರೂಪಾಂತರ'ದ ಕೆ.ಎಸ್.ಡಿ.ಎಲ್. ಚಂದ್ರು ಸಿಕ್ಕರು. ಅವರ ತಂಡಕ್ಕೆ ನನ್ನನ್ನು ತೆಗೆದುಕೊಳ್ಳಲು ಕೇಳಿದೆ. ತಾಲೀಮಿನ ದಿನ ಬರಲು ಹೇಳಿದರು. ಚಿಕ್ಕ ಪಾತ್ರ ಕೊಟ್ಟರು. ಅದರ ಮೊದಲ ಪ್ರದರ್ಶನ ಹೈದರಾಬಾದ್‌ನಲ್ಲಿ ಇತ್ತು. ಆ ಸಂಚಾರ ಅದ್ಭುತವಾಗಿತ್ತು. ಸುರೇಶ್ ಅನಗಳ್ಳಿ ನಮ್ಮ ತಂದೆಯ ಸ್ನೇಹಿತರು. ತಂದೆಯ ಪರಿಚಯದಿಂದ 'ಅನೇಕ'ಕ್ಕೆ ಸೇರಿದೆ. ಅಷ್ಟರಲ್ಲಿ 'ಉಘೇ ಉಘೇ ಮಾದೇಶ್ವರ'ಕ್ಕೆ ಅವಕಾಶ ಸಿಕ್ಕಿತು. ನಂತರ 'ಜೈ ಹನುಮಾನ್', 'ಕನ್ಯಾಕುಮಾರಿ' ಮಾಡಿದೆ. ಕೋವಿಡ್ ಬಂದು ಸಿನಿಮಾಕ್ಕೆ ಸಿಕ್ಕ ಅವಕಾಶ ಬಂದ್ ಆಯಿತು. ಅದು ಯಾವಾಗ ಆರಂಭ ಆಗುತ್ತದೆಯೋ ಗೊತ್ತಿಲ್ಲ. ಈಗ ಸದ್ಯ 'ರಾಧಿಕಾ'ದಲ್ಲಿ ತೊಡಗಿದ್ದೇನೆ.



◆ **ಪೌರಾಣಿಕ–ಸಾಮಾಜಿಕ ಪಾತ್ರಗಳ ಬಗ್ಗೆ ಹೇಳಿ.**

ಸಾಮಾಜಿಕ ಅಂದರೆ ನಾವು ಈಗ ಹೇಗೆ ಮಾತನಾಡುತ್ತಿದ್ದೇವೋ ಹಾಗೆಯೇ ಇರುತ್ತದೆ. ಅದರಲ್ಲಿ ನಟನೆಯನ್ನು ಮಾಡುತ್ತೇವೆ. ಪೌರಾಣಿಕ ಭಿನ್ನವಾಗುತ್ತದೆ. ಅದರದ್ದೇ ಆದ ದೇಹ ಭಾಷೆ ಇದೆ. ಸಾಮಾಜಿಕ ರೀತಿಯಲ್ಲಿ ಮಾಡಲು ಸಾಧ್ಯವಿಲ್ಲ. ಪೌರಾಣಿಕ ಕಲ್ಪನೆಗೆ ಈಗಾಗಲೇ ಒಂದು ರೂಪ ಇರುತ್ತದೆ. ಅದನ್ನು ಬಳಸಿಕೊಂಡೇ ಮತ್ತೊಂದು ರೂಪವನ್ನು ನೀಡಬೇಕಾದ ಸವಾಲು ಇರುತ್ತದೆ. ಭಾಷೆ ಕೂಡ ಗತ್ತು ಮತ್ತು ಗಾಂಭೀರ್ಯದಿಂದ ಕೂಡಿರುತ್ತದೆ.

◆ **ಸೆಲೆಬ್ರಿಟಿ ಆಗುವ ಕನಸು ಇತ್ತಾ?**

ದೇವರಾಣೆ ಇರಲಿಲ್ಲ. ನಾನೊಬ್ಬ ಒಳ್ಳೆಯ ಕ್ರೀಡಾಪಟು ಆಗುತ್ತೇನೆ ಎಂದುಕೊಂಡಿದ್ದೆ. ಜೀವನ ಎಲ್ಲಿಂದ ಎಲ್ಲಿಂದಲೋ ಸಾಗಿ ಇಲ್ಲಿಗೆ ಬಂದು ನಿಂತಿದೆ. ಎಲ್ಲ ಕ್ಷೇತ್ರದಲ್ಲಿಯೂ ಆಸಕ್ತಿ ಇದೆ. ಕಲಿಯಬೇಕು ಎನ್ನುವ ಹಸಿವು ಇದೆ. ಯಾವುದೇ ಪಾತ್ರ ಮಾಡಿದರೂ ಅದು ತೃಪ್ತಿ ಅಂತ ಅನ್ನಿಸಿಲ್ಲ. ಇನ್ನೂ ಮಾಡಬೇಕು ಎನ್ನುವ ಬಯಕೆ ಇದೆ. ಈಗ ಶೂಟಿಂಗ್ ಸೆಟ್‌ನಲ್ಲಿ ಕೆಲಸ ಮಾಡುವವರ ಜೊತೆ ಕೂಡ ಕಲಿಯುತ್ತೇನೆ. ಹೋಟೆಲ್‌ಗೆ ಹೋದರೂ ಅಲ್ಲಿನ ಕಾರ್ಮಿಕರಿಂದ ನೋಡಿ ಕಲಿಯುತ್ತೇನೆ. ಅಲ್ಲೂ ಒಂದಿಬ್ಬರು ಭಿನ್ನವಾಗಿ ಕಾಣಿಸುತ್ತಾರೆ. ದೇವಸ್ಥಾನಕ್ಕೆ ಹೋದರೂ ದೇವರಿಗೆ ಕೈಮುಗಿಯುವ ಭಿನ್ನ ಬಗೆಗಳನ್ನು ನಾನು ಕಂಡಿದ್ದೇನೆ.

■ **ರಾಘವೇಂದ್ರ ಕೆ.**